# ಕಂದಾಯ ಇಲಾಖೆ

# ಜಿಲ್ಲಾಧಿಕಾರಿಯವರ ಕಛೇರಿ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ನಂ. ಸಿಬ್ಬಂದಿ(1)ಸಿಆರ್ 360/10-11 ದಿನಾಂಕ 29-08-2011

## ಅಧಿಸೂಚನೆ

## ಗ್ರಾಮ ಲೆಕ್ಕಿಗರುಗಳ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅರ್ಜಿ ಆಹ್ವಾನ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಶಿವಮೊಗ್ಗ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ 2009ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಕೆಲವು ಅಂಗವಿಕಲ ಅಭ್ಯರ್ಥಿಗಳು ಲಭ್ಯವಿಲ್ಲದೆ ಖಾಲಿ ಇರುವ ಹಾಗೂ ಅನಂತರ ವಯೋನಿವೃತ್ತಿ, ರಾಜೀನಾಮೆ, ಮುಂಬಡ್ತಿ ವರ್ಗಾವಣೆ ಇನ್ನಿತರ ಕಾರಣಗಳಿಂದ ತೆರವಾಗಿರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು(ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್) (ಕೇಡರ್ ಅಂಡ್ ರಿಕ್ರೂಟ್‌ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009 ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪತ್ರ ಕಂಇ 4 ಬಿಎಸ್‌ಸಿ 2011 ದಿನಾಂಕ 25-02-2011ರಲ್ಲಿ ಅನುಮೋದನೆ ನೀಡಿದೆ. ಅದರಂತೆ ಗ್ರಾಮಲೆಕ್ಕಿಗರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿದೆ.**

**ಹುದ್ದೆಗಳ ವರ್ಗೀಕರಣ:**

| 1 | 2009-2010ನೇ ಸಾಲಿನ ನೇರ ನೇಮಕಾತಿಯಿಂದ ಭರ್ತಿಯಾಗದೆ ಉಳಿದ ಹುದ್ದೆಗಳು | | | | | | | | |
|---|---|---|---|---|---|---|---|---|---|
| ಕ್ರ. ಸಂ. | ವರ್ಗೀಕರಣದ ವಿವರ | | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
| 1 | ಸಾಮಾನ್ಯ ಅರ್ಹತೆ | | 0 | 0 | 0 | 1 | 0 | 0 | 0 | 1 |
| 2 | ಪರಿಶಿಷ್ಟ ಜಾತಿ | | 0 | 0 | 0 | 1 | 0 | 0 | 0 | 1 |
| 3 | ಪ್ರವರ್ಗ II (A) | | 0 | 0 | 0 | 1 | 0 | 0 | 0 | 1 |
| | ಒಟ್ಟು | | **0** | **0** | **0** | **3** | **0** | **0** | **0** | **3** |
| **11** | **2010-2011ನೇ ಸಾಲಿನ ಖಾಲಿ ಹುದ್ದೆಗಳು ( ರೋಸ್ಟರ್ ಬಿಂದು 46 ರಿಂದ 85ರವರೆಗೆ)** | | | | | | | | | |
| ಕ್ರ. ಸಂ. | ವರ್ಗೀಕರಣದ ವಿವರ | ಶೇಕಡಾ ಪ್ರಮಾಣ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
| 1 | ಸಾಮಾನ್ಯ ಅರ್ಹತೆ | 50% | 4 | 6 | 5 | 1 | 2 | 1 | 1 | 20 |
| 2 | ಪರಿಶಿಷ್ಟ ಜಾತಿ | 15% | 1 | 2 | 2 | 0 | 1 | 0 | 0 | 06 |
| 3 | ಪರಿಶಿಷ್ಟ ಪಂಗಡ | 3% | 0 | 0 | 1 | 0 | 0 | 0 | 0 | 01 |
| 4 | ಪ್ರವರ್ಗ I | 4% | 0 | 0 | 1 | 1 | 0 | 0 | 0 | 02 |
| 5 | ಪ್ರವರ್ಗ II(A) | 15% | 1 | 2 | 2 | 0 | 1 | 0 | 0 | 06 |
| 6 | ಪ್ರವರ್ಗ II (B) | 4% | 0 | 0 | 1 | 0 | 0 | 0 | 0 | 01 |
| 7 | ಪ್ರವರ್ಗ III (A) | 4% | 0 | 1 | 1 | 0 | 0 | 0 | 0 | 02 |
| 8 | ಪ್ರವರ್ಗ III (B) | 5% | 0 | 0 | 1 | 1 | 0 | 0 | 0 | 02 |
| | ಒಟ್ಟು | | **6** | **11** | **14** | **3** | **4** | **1** | **1** | **40** |
| | ಒಟ್ಟು | | **6** | **11** | **14** | **6** | **4** | **1** | **1** | **43** |

**ವೇತನ ಶ್ರೇಣಿ:** 5800-100-6000-125-6500-150-7100-175-7800-200-8600-225-9500-250-10500

**ಶೈಕ್ಷಣಿಕ ವಿದ್ಯಾರ್ಹತೆ:** ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅಥವಾ CBSE ಅಥವಾ CSE ಅಥವಾ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ವಯೋಮಿತಿ: ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಂದರೆ ದಿನಾಂಕ 05-10-2011 ದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

| ವರ್ಗೀಕರಣದ ವಿವರ | ಕನಿಷ್ಟ | ಗರಿಷ್ಟ |
|---|---|---|
| ಪ.ಜಾ./ಪ.ಪಂ/ಪ್ರ-1 | 18 | 40 |
| 2ಎ, 2ಬಿ, 3ಎ, 3ಬಿ | 18 | 38 |
| ಸಾಮಾನ್ಯ ವರ್ಗ | 18 | 35 |

**ಅರ್ಜಿ ಸಲ್ಲಿಸುವ ವಿಧಾನ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.** ಅಂತರ್ಜಾಲದ ಮೂಲಕ (On line) ಅರ್ಜಿಗಳನ್ನು ದಿನಾಂಕ 05-09-2011 ರಿಂದ ಸಲ್ಲಿಸಬಹುದಾಗಿದ್ದು ಕೊನೆಯ ದಿನಾಂಕ 05-10-2011 ಆಗಿರುತ್ತದೆ.

**ಅರ್ಜಿ ಶುಲ್ಕ:**

| | |
|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಮಹಿಳಾ ಅಭ್ಯರ್ಥಿಗಳು | ರೂ. 100-00 |
| ಸಾಮಾನ್ಯ ವರ್ಗ 2ಎ 2ಬಿ 3ಎ 3ಬಿ ವರ್ಗದ ಅಭ್ಯರ್ಥಿಗಳಿಗೆ | ರೂ. 200-00 |

**ಅರ್ಜಿ ಸಲ್ಲಿಸುವ ವಿಧಾನ:** ಅರ್ಜಿಗಳನ್ನು ಆನ್‌ಲೈನ್ (On line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಸಲ್ಲಿಸತಕ್ಕದ್ದಾಗಿದೆ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್‌ಸೈಟ್ http://Shimoga-VA.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯನ್ನು ತುಂಬಬೇಕು. ಅಭ್ಯರ್ಥಿಯು submit button ನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference No.) ಸೃಷ್ಟಿಯಾಗುತ್ತದೆ. ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಯು ಸ್ವೀಕೃತಿ ಪತ್ರ (Acknowledgement Slip) ಮತ್ತು ದ್ವಿಪ್ರತಿ ಚಲನ್ ಅನ್ನು ತೆಗೆದುಕೊಳ್ಳತಕ್ಕದ್ದು. ಈ ಚಲನ್ ಅನ್ನು ಅರ್ಜಿಯ ಶುಲ್ಕದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ ಪಾವತಿಸಬೇಕು. **ಅಭ್ಯರ್ಥಿಗಳು ಸ್ವೀಕೃತಿ ಸ್ಲಿಪ್‌ನ್ನು ಮತ್ತು ಚಲನ್ ಕಾಪಿಯ ಒಂದು ಪ್ರತಿಯನ್ನು ಕಡ್ಡಾಯವಾಗಿ ಇರಿಸಿಕೊಳ್ಳತಕ್ಕದ್ದು. ಇನ್ನೊಂದು ಚಲನ್‌ಪ್ರತಿ ಬ್ಯಾಂಕ್ ಬಳಿ ಇರುತ್ತದೆ. ಅಭ್ಯರ್ಥಿಗಳ ಬಳಿ ಇರುವ ಚಲನ್‌ನ್ನು ಸ್ಕ್ಯಾನ್ ಮಾಡಿ ಮೇಲೆ ತಿಳಿಸಿರುವ ವೆಬ್‌ಸೈಟ್ ವಿಳಾಸಕ್ಕೆ ಅಪ್‌ಲೋಡ್ ಮಾಡತಕ್ಕದ್ದು.** ಈ ದಾಖಲೆಗಳನ್ನು ನಿಗದಿಪಡಿಸಿದ ದಿನಾಂಕದಂದು ಹಾಜರ್‌ಪಡಿಸತಕ್ಕದ್ದು. ಬ್ಯಾಂಕ್‌ನಲ್ಲಿ ನಿಗದಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 05-10-2011 ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದಿನಾಂಕ 29-08-2011 ರ ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳ ಕಛೇರಿ, ಉಪವಿಭಾಗಾಧಿಕಾರಿಗಳ ಕಛೇರಿ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು ನೋಡಬಹುದಾಗಿದೆ. ಅಲ್ಲದೆ ಕಛೇರಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿ ಸೂಚಿಯನ್ನು ಪರಿಶೀಲಿಸಬಹುದಾಗಿದೆ.

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 08182-225410,
08182-221010.

E-mail vashimogga@gmail.com

**ಟಿಪ್ಪಣಿ:** ಆಯ್ಕೆ ಪ್ರಕ್ರಿಯೆಯು ಅವರು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ (On Merit) ಆಧಾರದ ಮೇಲೆ ಆಯಾ ವರ್ಗಕ್ಕೆ ಸಂಬಂಧಿಸಿದಂತೆ ಮಾತ್ರ ನಡೆಯುತ್ತದೆ.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.